ತುಮಕೂರು ಡಿಸ್ಟ್ರಿಕ್ಟ್.

ತಾರೀಖು 26ನೇ ಜನವರೀ 1887.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಡಿಸ್ಟ್ರಿಕ್ಟ್ ತುಮಕೂರು 8 ತಾಲ್ಲೂಕುಗಳಲ್ಲಿ ಸರಕಾರದ ಜಮ್ಮಿ ವೊಳಗೆ ಯಿರತಕ್ಕ ಕುರಂಗದ ಕಲ್ಲುಗಳನ್ನ ಜಮಾಯಿಸತಕ್ಕ ಹಕ್ಕನ್ನು ಸ್ಯ 1887—88ನೇ ಇಸವಿ ಸರ್ವಜಿತು ಸಂವತ್ಸರಕ್ಕೆ ನೊತ್ರ ಯಿಜಾರೆ ಕೊಡಲು ಸ್ಯ 1887ನೇ ಇಸವಿ ಮಾರ್ಚೀ ತಾರೀಖು ಗರಲ್ಲು ದಿವಿ 11 ಘಂಟೆ ಲಾಗಾಯಿಕು 5 ಘಂಟೆವರಿಗೆ ತುಮಕೂರು ಡಿಸ್ಟ್ರಿಕ್ಟ್ ಆಫಿಸ್ ಬಳಿ ಡೆಪ್ಯೂಟೆಕಮ್ಮಿಷನರ್ ಸಾಹೇಬರವರ ರೂಬರೂವ್ ಅಥವಾ ಹಾಜರಿರುವ ಅಸಿಸ್ಟೆಂಟ್ ಕಮ್ಮಿಷನರ್ ಸಾಹೇಬರವರ ರೂಬರೂಬು ಹರಾಜು ಮಾಡಲ್ಪಡುವದು.

ಷರತ್ತುಗಳು.

1. ಹರಾಜು ಕೈದಾದ ಕೂಡ್ಲೆ ಆಖೈರು ಸವಾಲ್‌ದಾರನು ಶೇಕಡ 25 ರೂಪಾಯಿ ಮೇರಿಗೆ ನಗದು ಶೇವಣಿಯನ್ನು ಇಡಬೇಕು ಹರಾಜು ದಿರ್ವಾಸಾಹೆಬರವರಿಂದ ಮಂಜೂರಾದ ವಡನೇ 15 ದಿವಸದಲ್ಲಿ ಪೂರಾ ಮೊಬಲಗನ್ನು ಹಾಜರು ಮಾಡಬೇಕು. ಹಾಗೆ ಹಾಜರು ಮಾಡದೆ ತಪ್ಪಿದರೆ ಪುನಹ ಹರಾಜು ಮಾಡಲ್ಪಟ್ಟು ನಷ್ಟಬಂದ ಮೊಬಲಗಿಗೆ ಮೊದಲಿನ ಚಡ್ಡೆ ಸವಾಲ್‌ದಾರನನ್ನು ಗುರಿಮಾಡಲಾದೀತು. ಮತ್ತು ಶೇವಣಿಯನ್ನು ಸರಕಾರಕ್ಕೆ ಶೇರಿಸಿಕೊಳ್ಳಲಾದೀತು.

2. ಕುರಂಗದ ಕಲ್ಲುಗಳನ್ನು ತೆಗಿಯುವ ವುದ್ದಿಶ್ಯ ಭೂಮಿ ಸಾಗುವಳಿಗೆ ನಾಲಾಯಕು ಆಗುವಂತೆ ಮಾಡಕೂಡದು ಗುಂಡಿಗಳನ್ನು ಯಿಜಾರೆದಾರನೇ ಮುಚ್ಚಿಸಬೇಕು.

3. ಹಿಡುವಳಿಯಲ್ಲಿರುವ ಭೂಮಿಯಲ್ಲಿ ಕುರಂಗದಕಲ್ಲುಗಳನ್ನು ಹಿಡುವಳೀದಾರನ ಅನುಮತಿ ಪಡದು ತೆಗದುಕೊಳ್ಳಬೇಕು.

4. ಬಂಜರು ಭೂಮಿಗಳನ್ನ ಹುಲ್ಲುಬನ್ನಿ ಮತ್ತು ಸಾಗುವಳಿಗೆ ಕೊಡಲಾದೀತು ಹಾಗೆ ಕೊಡೋಣದರಿಂದ ಕುರಂಗದಕಲ್ಲು ಇಜಾರೆದಾರನಿಗೇನಾದರು ನಷ್ಟವಾದರೆ ಅದಕ್ಕೆ ಸರಕಾರದವರು ಜವಾಬುದಾರರಲ್ಲ.

5. ಹರಾಜು ಮೊಬಲಗಿನ ಮೇಲೆ ಶೇಕಡಾ 6—4—0 ರೂಪಾಯಿ ಮೇರೆ ಲೋಕಲ್‌ಸೆಸ್ಸನ್ನೂ ಕೊಡಬೇಕು.

ಈ ವಿಷಯದಲ್ಲಿ ಮತ್ತೇನಾದರೂ ಹೆಚ್ಚು ತಪಸೀಲ್ ತಿಳಿಯಬೇಕಾಗಿದ್ದರೆ ಡಿಸ್ಟ್ರಿಕ್ಟ್ ಆಫೀಸಿನಲ್ಲಿ ತಿಳದುಕೊಳ್ಳಬಹುದು.

ಪಿ. ಯ್. ಕೃಷ್ಣಮೂರ್ತಿ,
ಡೆಪ್ಯೂಟಿ ಕಮ್ಮಿಷನರ್.

ಮೈಸೂರು ಡಿಸ್ಟ್ರಿಕ್ಟ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜೀಯವರ ಕೋರ್ಟಿನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 58.

ಮೃತಪಟ್ಟ ಪುಟ್ಟಣ್ಣನವರ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಶಿದ್ದಲಿಂಗವ್ವ ಮೈನರ್ ಗಾರ್ಡಿಯ್ ತಾಯಿ ಭದ್ರಮ್ಮನು, ಮೃತಪಟ್ಟ ಸದರೀ ಪುಟ್ಟಣ್ಣನವರಿಗೆ ಮಗ ಮೈನರ್ ಸಬಬು ಗಾರ್ಡಿಯ್ ಆಗಬೇಕೆಂಬ ಹಕ್ಕುದಾರಿ ಮೇಲೆ ಶ್ರೀರಂಗಪಟ್ಟಣದ ಸ್ಥಳದ ಸದರೀ ಭದ್ರಮ್ಮನು ಹುಣಸೂರು ತಾಲ್ಲೂಕು ಗೊವಿಂದನಹಳ್ಳಿ ವಾಸಸ್ಥನಾಗಿ ಮೃತಪಟ್ಟ ಪುಟ್ಟಣ್ಣನವರ ಜಿಂದಗಿ ಬಗ್ಯಾಗಿ ಬರಬಕ್ಕ 500 ರೂಪಾಯಿ ಸ್ಥಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಭದ್ರಮ್ಮನ ಅರ್ಜಿಯನ್ನು 1887ನೇ ಇಸವಿ ಮಾರ್ಚಿ ತಿಂಗಳು ತಾರೀಖು 3ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪುಟ್ಟಣ್ಣನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1887ನೇ ಇಸವಿ ಅರ್ಜೀ ನಂಬರ್ 59.

ಮೃತಪಟ್ಟ ಪುಟ್ಟಣ್ಣನವರ ಆಸ್ತಿ ವಿಷಯದಲ್ಲಿ.—

ಅರ್ಜೀದಾರ ಶಿದ್ದಲಿಂಗವ್ವ ಮೈನರ್ ಗಾರ್ಡಿಯ್ ತಾಯಿ ಭದ್ರಮ್ಮನು ಮೃತಪಟ್ಟ ಸದರೀ ಪುಟ್ಟಣ್ಣನವರಿಗೆ ವೊಮ್ಮಗ ಮೈನರ್ ಸಬಬು ತಾಯಿಗಾರ್ಡಿಯ್ ಆಗಬೇಕೆಂಬ ಹಕ್ಕುದಾರಿ ಮೇಲೆ ಶ್ರೀರಂಗಪಟ್ಟಣದ ಸ್ಥಳದ ಸದರೀ ಭದ್ರಮ್ಮನು ಹುಣಸೂರು ತಾಲ್ಲೂಕು

ಗೋವಿಂದನಹಳ್ಳೀಲಿ ವಾಸಸ್ಥನಾಗಿ ಮೃತಪಟ್ಟ ಪುಟ್ಟಣ್ಣನ ಜಿಂದಗಿ ಬಗ್ಯಾಗಿ ಬರತಕ್ಕ ಮೃತಪಟ್ಟ ಪುಟ್ಟಣ್ಣನಿಗೂ, ಅರ್ಜೀದಾರಳಿಗೂ, ಹಿಸ್ಸೆ ಆದ್ದರಲ್ಲಿ ಮೈನರೀಗೋಸ್ಕರ ಅರ್ಜೀದಾರಳ ಹಿಸ್ಸೆಗೆ ಪುಟ್ಟಣ್ಣನ ಹೆಸರಿನ ಲೇವಾದೇವಿ ಬಾಬತು (500) ರೂಪಾಯಿ ಬಂದು ಶಾರಿ ಖತ್ತು ಹುಟ್ಟಿರುತ್ತೆ. ಆ ಬಾಬತು ಮೊಬಲಗು ವಸೂಲ್‌ಮಾಡಿಕ್ಕೊಳ್ಳತಕ್ಕ ಬಗ್ಯೆ 500 ರೂಪಾಯಿ ಸಾಲವನ್ನು ವಸೂಲ್ ಮಾಡಿಕೊಳ್ಳುವ ದಕ್ಕೆ 1860ನೇ ಇಸವಿ 27ನೇ ಆಕ್ಟುಮೇರಿಗೆ ಸರಟಿಫಿಕೇಟ್ ಬಗ್ಯೆಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಭದ್ರಂಮನ, ಅರ್ಜೀಯನ್ನು 1887ನೇ ಇಸವಿ ಮಾರ್ಚೀ ತಿಂಗಳು ತಾರೀಖು 3ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪುಟ್ಟಣ್ಣನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1887ನೇ ಇಸವಿ ಅರ್ಜೀ ನಂಬರ್ 72.

ಮೃತಪಟ್ಟ ಚಿಕ್ಕೇಗೌಡ ವುರಫ್ ಕರಿಗೌಡನ ಆಸ್ತಿ ವಿಷಯದಲ್ಲಿ.—

ಅರ್ಜೀದಾರ ದೇವಾ ಮೈನರ್ ಗಾರ್ಡಿಯರ್ನ್ ಬೋರೆಗೌಡನು, ಮೃತಪಟ್ಟ ಸದರೀ ಚಿಕ್ಕೇಗೌಡ ವುರಫ್ ಕರೀಗೌಡನಿಗೆ ದತ್ತುಮಗ ಮೈನರಿ ಸಬಬು ಇವನ ಸೋದರಮಾವ ಬೋರೆಗೌಡನ ಮಗ ಬೋರೆಗೌಡ ಮೈಸೂರು ತಾಲ್ಲೂಕು ನಾಗನಹಳ್ಳಿ ಸ್ಥಳದ ಸದರೀಬೋರೇಗೌಡನು ಸದರೀ ವಾಸಸ್ಥನಾಗಿ ಮೃತಪಟ್ಟ ಚಿಕ್ಕೇಗೌಡನ ಜಿಂದಗೀಬಗ್ಯಾಗಿ ಬರತಕ್ಕ 400 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಬೋರೆಗೌಡನ ಅರ್ಜೀಯನ್ನು 1887ನೇ ಇಸವಿ ಮಾರ್ಚೀ ತಿಂಗಳು ತಾರೀಖು 3ರಲ್ಲುಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚಿಕ್ಕೇಗೌಡ ವುರಫ್ ಕರಿಗೌಡನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1887ನೇ ಇಸವಿ ಫಿಬ್ರವರೀ ತಿಂಗಳು 8ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೇ ಕೊಡೋಣಾಗಿಧೆ.

ಎಸ್. ಹೇವಾಜಿರಾವ್, ಡಿಸ್ಟ್ರಿಕ್ಟು ಜಡ್ಜ್.

ತಾರೀಖು 3ನೇ ಫಿಬ್ರವರೀ 1887.

ಇದರಿಂದ ತಿಳಿಸುವದೇನಂದರೆ, ಮೈಸೂರು ಜೈಲ್‌ನಲ್ಲಿ ಖೈದು ಮಾಡಲ್ಪಟ್ಟಿರುವ ಖೈದಿಗಳ ಉಪಯೋಗದ ಬಗ್ಯೆ ಸ್ನ 1887ನೇ ಇಸವಿ ಏಪ್ರೆಲ್ ಗರ್ಸ್ಟೀ ತಾರೀಖು ಮೊದಲು 1888ನ್ನೇ ಮಾರ್ಚೀ 31ನೇ ತಾರೀಖುವರಿಗೆ ಎರಡು ದಿನಗಳೂ ಕೆಲಸಿ ಜೀಕಾದ ಆಹಾರ ವಸ್ತೈರೇ ದರೋಬಸ್ತು ಜಿನಸುಗಳನ್ನೂ ಕಂಟ್ರಾಕ್ಟು ಮೂಲಕ ಸರಬರಾಯಿ ಮಾಡುವ ಬಗ್ಯೆ ಬರುವ ಬಂದು ಮಾಡಲ್ಪಟ್ಟ ದರಖಾಸ್ತುಗಳನ್ನು ಮೈಸೂರು ಜೈಲ್ ಸೂಪರ್‌ಟೆಂಡೆಂಟರವರು ಸ್ನ 1837ನೇ ಇಸವಿ ಮಾರ್ಚೆ 15ನೇ ತಾರೀಖುವರಿಗೆ ತೆಗದುಕೊಳ್ಳುವರು.

2. ಸದರೀ ಮೇಲ್ಕಂಡ ತಾರೀಖು ತರುವಾಯ ಯಾವ ದರಖಾಸ್ತುಗಳೂ ತೆಗದುಕೊಳ್ಳಲ್ಪಡಲಾರದು.

3. "ಮೈಸೂರು ಜೈಲ್‌ಗಾಗಿ ಆಹಾರ ಪದಾರ್ಥಗಳ ಸರಬರಾಯಿ ಬಗ್ಯೆ ದರಖಾಸ್ತುಗಳು" ಯಂಬದಾಗಿ ವಿಳಾಸ ಬರೆಯಲ್ಪಡತಕ್ಕದ್ದು.

4. 500 ರೂಪಾಯಿಗಳು ನಗದಾಗಿ ಅಥವಾ ಕರೆನ್ಸೀ ನೋಟುಗಳ ಮೂಲಕ ಡಿಪಾಜಿಟ್‌ನೀ ಕಳುಹಿಸಲ್ಪಟ್ಟ ಹೊರ್ತು ಯಾವ ದರಖಾಸ್ತುಗಳೂ ತೆಗದುಕೊಳ್ಳಲ್ಪಡಲಾರವು.

5. ದರಖಾಸ್ತುಗಳು ಮೈಸೂರು ಜೈಲ್ ಆಫೀಸಿನಲ್ಲಿ ಹಾಜರಾಗಲಿಕ್ಕೆ ಇಷ್ಟವುಳ್ಳ ದರಖಾಸ್ತುದಾರರ ರೂಬರೂ ಮೇಲ್ಕಂಡ ತಾರೀಖಿನೊಳಗೆ ಪ್ರಾತಃಕಾಲ $7\frac{1}{2}$ ಘಂಟೆಗೆ ಮೈಸೂರು ಜೈಲ್ ಸೂಪರ್‌ಟೆಂಡೆಂಟರವರಿಂದ ಖುಲ್ಲಾ ಮಾಡಲ್ಪಡುವವು.